**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

**ಸೆಷನ್ಸ್ ಕೇಸ್ ನಂಬ್ರ 5/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಸೂರ್ಯಪ್ರಕಾಶ್ | ಪ್ರಾ.ಸಾ: 10 |
| ತಂದೆಯ ಹೆಸರು | : | ಜೆ.ವಿ. ನಾರಾಯಣ ರಾವ್ | ಚಾ.ಸಾ: 20 |
| ಪ್ರಾಯ | : | 44 ವರ್ಷ | **ದಿನಾಂಕ: 22.08.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪುರೋಹಿತ | |
| ವಾಸಸ್ಥಳ | : | ಕೊಲ್ನಾಡು, ಮುಲ್ಕಿ ತಾಲೂಕು. | |

ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರಿಂದ:

ನನ್ನ ಬಳಿ ಕೆಎ-19-ಇಸಿ-2398 ನಂಬ್ರದ ಬಜಾಜ್ ಡಿಸ್ಕವರಿ-150 ದ್ವಿಚಕ್ರ ವಾಹನ ಇದೆ.

2. ದಿನಾಂಕ: 17.09.2023 ರಂದು ನಾನು ಮಂಗಳೂರಿನಲ್ಲಿ ಪೌರೋಹಿತಕ್ಕಾಗಿ ನನ್ನ ಮನೆಯಿಂದ ಮೇಲೆ ಹೇಳಿದ ನನ್ನ ದ್ವಿ ಚಕ್ರವಾಹನದಲ್ಲಿ ಹೊರಟು ಕೊಲ್ನಾಡಿನ ಚಂದ್ರಮೌಳೀಶ್ವರ ದೇವಸ್ಥಾನದ ಬಳಿ ಇರುವ ಬಸ್ಸು ನಿಲ್ದಾಣದ ಬಳಿ ಮೋಟಾರ್ ಸೈಕಲನ್ನು ಲಾಕ್ ಮಾಡಿ ನಿಲ್ಲಿಸಿ, ನನ್ನ ಸ್ನೇಹಿತನಾದ ಅಶ್ವಿತ್ ರವರ ಮೋಟಾರ್ ಸೈಕಲಿನಲ್ಲಿ ಮಂಗಳೂರಿಗೆ ಅವರ ಜೊತೆ ಹೋಗಿರುತ್ತೇನೆ. ಆಗ ಸಮಯ ಬೆಳಿಗ್ಗೆ 7.30 ಗಂಟೆಯಾಗಿತ್ತು.

3. ನಾನು ಪೌರೋಹಿತ್ಯ ಕೆಲಸ ಮುಗಿಸಿ ಮಧ್ಯಾಹ್ನ 2.30 ಗಂಟೆ ಸುಮಾರಿಗೆ ನನ್ನ ಗಾಡಿ ನಿಲ್ಲಿಸಿದ್ದ ಜಾಗಕ್ಕೆ ಬಂದು ನೋಡಿದಾಗ ನನ್ನ ವಾಹನ ಸದರಿ ಸ್ಥಳದಲ್ಲಿ ಇರಲಿಲ್ಲ. ನಾನು ಎಲ್ಲಾ ಕಡೆ ಹುಡುಕಾಡಿ, ನಂತರ ಮುಲ್ಕಿ ಪೊಲೀಸು ಠಾಣೆಗೆ ದೂರು ನೀಡಿರುತ್ತೇನೆ.

4. ದಿನಾಂಕಃ 11.10.2023 ರಂದು ಮುಲ್ಕಿ ಪೊಲೀಸರು ನನಗೆ ಫೋನ್ ಮಾಡಿ ನನಗೆ ಪೊಲೀಸು ಠಾಣೆಗೆ ಬರಲು ಹೇಳಿದರು. ನಾನು ಪೊಲೀಸು ಠಾಣೆಗೆ ಹೋದಾಗ ನನ್ನ ದ್ವಿಚಕ್ರ ವಾಹನ ಅಲ್ಲಿತ್ತು. ನಾನು ಅದನ್ನು ಗುರುತಿಸಿರುತ್ತೇನೆ. ಸದರಿ ನನ್ನ ವಾಹನವನ್ನು ಒಂದು ಮಹಿಳೆಯ ಕರಿಮಣಿ ಸರ ದರೋಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಳಸಲಾಗಿದೆ ಎಂದು ಪೊಲೀಸರಿಂದ ತಿಳಿದು ಬಂತು. ನಂತರ ನಾನು ನನ್ನ ವಾಹನವನ್ನು ಮೂಡಬಿದ್ರೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ನನ್ನ ದ್ವಿಚಕ್ರ ವಾಹನವನ್ನು ನನ್ನ ವಶಕ್ಕೆ ಪಡೆದಿರುತ್ತೇನೆ.

5. ನಾನು ಪೊಲೀಸರಿಗೆ ನೀಡಿದ ದೂರನ್ನು ಈಗ ನೋಡುತ್ತಿದ್ದು, ಅದರ ಯಥಾಪ್ರತಿಯನ್ನು ನಿ.ಪಿ.23 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇದೆ. ನನ್ನ ದೂರಿನ ಆಧಾರದಲ್ಲಿ ಪೊಲೀಸರು ತಯಾರಿಸಿದ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.24 ಎಂದು ಗುರುತಿಸಲಾಯಿತು ಮತ್ತು ಅದರಲ್ಲಿ ನನ್ನ ಸಹಿ ಇದೆ.

6. ಸದರಿ ಪ್ರಕರಣದಲ್ಲಿ ನಾನು ನನ್ನ ಹೇಳಿಕೆ ನೀಡಿರುತ್ತೇನೆ. ನನ್ನ

ವಾಹನದ ಫೋಟೋ ನೋಡಿದರೆ ಗುರುತಿಸಬಲ್ಲೆ. ಈಗ ನೋಡುತ್ತಿರುವ ಫೋಟೋ ನನ್ನ ವಾಹನದ್ದಾಗಿದ್ದು, ಸದರಿ ಫೋಟೋವನ್ನು ಈಗಾಗಲೇ ನಿ.ಪಿ.17(4) ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ **3** ಮತ್ತು **5**ನೇ ಆರೋಪಿ ಪರ ಶ್ರೀ ವಿ.ಆರ್.ಎ. ವಕೀಲರಿಂದ ಮತ್ತು **1, 2** ಮತ್ತು **6**ನೇ ಆರೋಪಿತರ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಶ್ರೀ ಜಿ.ವಿ.ಜಿ. ವಕೀಲರಿಂದಃ

(1 ರಿಂದ 6ನೇ ಆರೋಪಿತರ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.)

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.